ಆಗಿರುವುದು ನಮ್ಮ ಸಮಸ್ಯೆಯೊ, ನಮ್ಮ ಆಹಾರವನ್ನು ಬೇರೆಯವರ ಕಣ್ಣು ಕಿವಿ ಮೂಗುಗಳಿಗೆ ಹಿಂಸೆ ಕೊಡದಂತೆ ಮಾಡಿಕೊಂಡು ತಿನ್ನುವಲ್ಲಿ ಅಸೂಕ್ಷ್ಮರಾಗಿದ್ದೇವೆಯೊ ತಿಳಿಯದಾದೆ.

ಹಾಗೆ ಕಂಡರೆ ಅದೇನು ಸಕಲ ಸೌಲಭ್ಯವಿದ್ದ ಮನೆಯಾಗಿರಲಿಲ್ಲ. ಆದರೆ ಅದು ಬಿಡಲು ಮನಸ್ಸು ಬಾರದಷ್ಟು ಒಳ್ಳೆಯ ಪರಿಸರದಲ್ಲಿತ್ತು. ಮನೆಯನ್ನು ತಮ್ಮ ತೋಳತೆಕ್ಕೆಯಲ್ಲಿ ಬಾಚಿಕೊಂಡು ಬೆಳೆದಿದ್ದ ತೆಂಗಿನಮರಗಳಿಂದ ಟೆರೇಸಿನಲ್ಲಿ ನಿಂತುಕೊಂಡೆ ನಾವು ಎಳೆನೀರನ್ನು ಇಳಿಸಿಕೊಳ್ಳಬಹುದಿತ್ತು. ಸಮೀಪವಿದ್ದ ತೋಟದಲ್ಲಿ ರೈತರು ಬೆಳೆಯುತ್ತಿದ್ದ ಕಾಯಿಪಲ್ಲೆಗಳು ಸೋವಿಗೆ ಸಿಗುತ್ತಿದ್ದವು. ಆನೆಯಂತಹ ಎಮ್ಮೆ ಸಾಕಿದ್ದ ಗೌಳಿಗರು ಮಂದವಾದ ಹಾಲನ್ನು ವರ್ತನೆ ಹಾಕುತ್ತಿದ್ದರು. ಮುಂಜಾನೆ ವಾಕಿಂಗಿಗೆ ಮನೆಯೆದುರಿದ್ದ ದೇಶೋವಿಶಾಲ ಶಾಲಾಮೈದಾನವು ಅಂಗೈಯಂತೆ ಹರಡಿಕೊಂಡು ಪ್ರಶಸ್ತವಾಗಿತ್ತು. ಸಾಕ್ಷಾತ್ ತುಂಗಭದ್ರೆಯೇ ಶಿವನ ಜಟೆಯಲ್ಲಿ ಕುಳಿತಂತೆ ವಾಟರ್ ಟ್ಯಾಂಕೊಂದು ಎದುರಿಗೆ ನಿಂತಿತ್ತು. ಆದರೇನು, ಮನೆ ಖಾಲಿ ಮಾಡಲೇಬೇಕಿತ್ತು. ಪಂಪನ 'ಆದಿಪುರಾಣ'ದಲ್ಲಿ ರಾಜಕುಮಾರನೊಬ್ಬನು ತನ್ನ ಆಯುಷ್ಯ ಕೆಲವೇ ದಿನವೆಂದು ತಿಳಿದಾಗ, ಭವ್ಯವಾದ ಉಪ್ಪರಿಗೆಗಳಿಗೂ ಚೆಲುವಾದ ಉದ್ಯಾನವನಗಳಿಗೂ ಚಾರುಲೋಲಕಟಾಕ್ಷ ಸುಂದರಿಯರಿಗೂ 'ನಿಷ್ಕರುಣ ಯಮನು ನನ್ನನ್ನು ಎಳೆದೊಯ್ಯುವಾಗ ಸುಮ್ಮನೆ ನೋಡುತ್ತಿದ್ದೀರಲ್ಲ' ಎಂದು ವಿಲಾಪಿಸುವ ಪ್ರಸಂಗವಿದೆ. ಅವನದೇ ಅವಸ್ಥೆಯಲ್ಲಿದ್ದ ನಾವು ಜೋಲುಮೊಗ ಹಾಕಿಕೊಂಡು ಹೊಸಮನೆ ಹುಡುಕತೊಡಗಿದೆವು. ಅದು ಸುಲಭಕ್ಕೆ ಸಿಗಲಿಲ್ಲ. ಕೆಲವು ಮನೆಗಳು 'ಸ್ಲಂ' ಎಂದು ನಾಮಾಂಕಿತವಾದ ಪ್ರದೇಶಲ್ಲಿದ್ದವು. ನನಗೆ ಅಲ್ಲಿನ ಜನರ ಮಾತುಕತೆ, ಜೀವಂತಿಕೆ ಕಂಡು ನನ್ನ ಬರೆಹಕ್ಕೆ ಹೊಸ ಆಯಾಮವೇ ಸಿಗಬಹುದು ಎಂದು ಆಸೆಯಾಯಿತು. ಆದರೆ ಅಲ್ಲಿದ್ದರೆ ಐದೇ ವರ್ಷಗಳಲ್ಲಿ ತನ್ನ ಮುಗ್ಧ ಕಂದಮ್ಮಗಳು ಭೀಷಣ ಬೈಗುಳದಲ್ಲಿ ಪರಿಣತರಾಗಿ, ಸಾಧ್ಯವಾದರೆ ತಸ್ಕರ ವಿದ್ಯೆಯನ್ನೂ ಕಲಿತು ಬಳ್ಳಾರಿ ಜೈಲಿಗೆ ಹೋಗುವುದು ಗ್ಯಾರಂಟಿ ಎಂದು ಅಂದಾಜಿಸಿದ ಬಾನು, ವೀಟೊ ಚಲಾಯಿಸಿದಳು. ಇನ್ನು ಕೆಲವು ಮನೆಗಳೇನೊ ಚೆನ್ನಾಗಿದ್ದವು. ಆದರೆ ಸಾರಾಯಿ ಅಂಗಡಿ, ಕೋಳಿಫಾರಂ, ಗರಾಜು, ಸಿನಿಮಾ ಟಾಕೀಸು, ಮಸಣ ಇತ್ಯಾದಿ ವಿಶಿಷ್ಟ ವಾಸನೆ ಮತ್ತು ಶಬ್ದೋತ್ಪತ್ತಿಯ ತಾಣದಲ್ಲಿದ್ದವು. ಮಸಣದ ಹತ್ತಿರವಿದ್ದ ಒಂದು ಮನೆಯನ್ನು ನಾವು ಪರಿಶೀಲಿಸುವಾಗಲೇ ಬ್ಯಾಂಡು ಬಜಾಯಿಸುತ್ತ ಶಹನಾಯಿ ಊದುತ್ತ ಮಂಡಾಳು ಎರಚುತ್ತ 'ಪಟಾಕ್ಷಿ' ಸಿಡಿಸುತ್ತ ಮೆರವಣಿಗೆಯೊಂದು ಹಾದುಹೋಯಿತು. 'ಅಲ್ಲಿದೆ ನಿಮ್ಮನೆ' ಎಂದೆಚ್ಚರಿಸುವ ಸ್ಮಶಾನ ವೈರಾಗ್ಯ, ಎರಡು ವರ್ಷದ ಹಿಂದೆಯಷ್ಟೇ ದಾಂಪತ್ಯ ಹೂಡಿದ್ದ ನಮಗೆ ಬೇಡವಾಗಿತ್ತು. ಕೊನೆಗೂ ಒಳ್ಳೆಯ ಜಾಗದಲ್ಲಿ ಚೆನ್ನಾದ ಮನೆ ಸಿಕ್ಕಿತು. ಸಂಪಿಗೆ ಮನೆಯವರಿಗೆ ಮೀನುಗಂಧದಿಂದ ಬಿಡುಗಡೆ ಕರುಣಿಸಿದೆವು. ಆ ಮನೆ ಸಸ್ಯಾಹಾರಿಯೊಬ್ಬರಿಗೆ ಕೊಡಲಾಯಿತು ಎಂದು ಆಮೇಲೆ ತಿಳಿಯಿತು.

ಸದ್ಯದ ಹೊಸಮನೆ ಊರ ಹೊರಗೆ ಆಗತಾನೇ ಕಣ್ಬಿಡುತ್ತಿದ್ದ ಬಡಾವಣೆಯಲ್ಲಿತ್ತು. ಆಸುಪಾಸಿನ ಪರಿಸರವು ಮನೋಹರವಾಗಿತ್ತು. ಊರಿನ ಪಡುವಣ ದಿಸೆಗೆ ಅದುವೇ ಮೊದಲ ಮನೆಯಾಗಿದ್ದು, ರವಿಯ ಪ್ರಪ್ರಥಮ ಕಿರಣಗಳು ನಮ್ಮ ಮನೆಹೊಕ್ಕ ಬಳಿಕವೇ ಊರತ್ತ ತೆರಳಬೇಕಾಗಿತ್ತು. ಕದ ತೆರೆದರೆ ಎದುರಾ ಎದುರು, ಆಗಸ ತಿವಿಯಲು ಹೊರಟ ಜಲ್ಲಿಕಟ್ಟು ಗೂಳಿಯಂತಿರುವ ಜಂಬುನಾಥ ಬೆಟ್ಟ; ಪಚ್ಚೆಯ ಚಾಪೆಯಂತೆ ಹರಡಿದ ಹುಲ್ಲುಹಾಸಿನ